# ‘ಶಿಕ್ಷಣ ನೀತಿ ವೈಜ್ಞಾನಿಕವಾಗಿರಲಿ’

## ಶಿಕ್ಷಣದ ಜವಾಬ್ದಾರಿ ಕ್ರಿಯಾತ್ಮಕ ವ್ಯಕ್ತಿಯ ಸೃಷ್ಟಿ: ಸೇಂಟ್ ಜೋಸೆಫ್ ವಿವಿ ಉಪಕುಲಪತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕರಾಜ್ಯ ಹೊಸಶಿಕ್ಷಣನೀತಿಯುಪ್ರಜಾಸತಾತ್ಮಕ, ಧರ್ಮ ನಿರಪೇಕ್ಷ ಹಾಗೂ ವೈಜ್ಞಾನಿಕವಾಗಿ ಇರುವಂತೆ ನೋಡಿಕೊಳ್ಳಬೇಕಿದೆ ಎಂದು ಸೇಂಟ್ ಜೋಸೆಫ್ ವಿವಿ ಉಪ ಕುಲಪತಿ ಡಾ। ವಿಕ್ಟರ್‌ಲೋಬೋ ಹೇಳಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್ ಇಸಿ) ನಗರದ ಗಾಂಧಿ ಭವನದಲ್ಲಿ ಬುಧವಾರ ಆಯೋಜಿಸಿದ್ದ ರಾಜ್ಯಮಟ್ಟದ ಶೈಕ್ಷಣಿಕ ಸಮಾವೇಶ ದಲ್ಲಿ ಮಾತನಾಡಿದ ಅವರು, ಶಿಕ್ಷಣದ ಜವಾಬ್ದಾರಿ ಕೇವಲ ನುರಿತ ವ್ಯಕ್ತಿಗಳನ್ನು ಸೃಷ್ಟಿಸುವುದಲ್ಲ. ಬದಲಾಗಿ ಕ್ರಿಯಾತ್ಮಕ ಹಾಗೂ ವಿಮರ್ಶಾತ್ಮಕ ಚಿಂತನೆ ಉಳ್ಳ ವ್ಯಕ್ತಿಗಳನ್ನು ಸೃಷ್ಟಿಸುವುದಾಗಿದೆ, ಸಮಾಜವಾದಿ ಕ್ಯೂಬಾದ ಶಿಕ್ಷಣ ವ್ಯವಸ್ಥೆಯಿಂದ ಸ್ಫೂರ್ತಿ ಪಡೆದು ಉಚಿತ ಹಾಗೂ ಸಾರ್ವತ್ರಿಕ ಶಿಕ್ಷಣ ಖಾತ್ರಿಪಡಿಸಲು ಮುಂದಾಗಬೇಕು ಎಂದರು.

ಸಾಹಿತಿ ಪ್ರೊ.ಸಬಿತಾ ಬನ್ನಾಡಿ ಮಾತನಾಡಿ, ಭಾರ ತೀಯ ವೈವಿಧ್ಯತೆಯನ್ನು ಗಣನೆಗೆ ತೆಗೆದುಕೊಳ್ಳದೇ, ಏಕರೂಪ ರಾಷ್ಟ್ರೀಯ ಶಿಕ್ಷಣ ನೀತಿ-2020 ಜಾರಿ ಗೊಳಿಸುತ್ತಿರುವುದು ಅವೈಜ್ಞಾನಿಕ, ಅನೌಪಚಾರಿಕವಾ ಗಿದೆ ಮತ್ತು ಅಪ್ರಜಾತಾಂತ್ರಿಕವಾಗಿದೆ. ರಾಜ್ಯದಲ್ಲಿ ಇದು ತಲೆಕೆಳಗಾಗಿದ್ದು, ಶಾಲಾ ಶಿಕ್ಷಣ ಬಿಟ್ಟು ಪದವಿ ಶಿಕ್ಷಣದಲ್ಲಿ ಜಾರಿಗೊಳಿಸಲಾಗಿದೆ. ಎನ್‌ಇಪಿ ಜಾರಿ ಯಿಂದ ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ಹೆಚ್ಚಿದ್ದು, ಅವರ ಭವಿಷ್ಯ ಹಾಳು ಮಾಡುತ್ತಿದೆ. ಈ ಪಠ್ಯಗಳು 20 ವರ್ಷ ಹಿಂದಕ್ಕೆ ಕರೆದುಕೊಂಡು ಹೋಗಿವೆ ಎಂದರು.




ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಶೈಕ್ಷಣಿಕ ಸಮಾವೇಶದಲ್ಲಿ ಎನ್‌ಇಪಿ ಕುರಿತ ಸಮೀಕ್ಷಾ ವರದಿ, ಕರ್ನಾಟಕಕ್ಕೆ ಪರ್ಯಾಯ ಜನಪರ ಶಿಕ್ಷಣ ನೀತಿಯ ಕರಡನ್ನು ಅಲ್ಲಮಪ್ರಭು ಬೆಟ್ಟದೂರು ಅವರಿಗೆ ಸಲ್ಲಿಸಲಾಯಿತು.

ಎಐಎಸ್‌ಇಸಿ ಪ್ರಧಾನ ಕಾರ್ಯದರ್ಶಿ ಪ್ರೊ. ತರು ಣಕಾಂತಿ ನಸ್ಕರ್ ಮಾತನಾಡಿ, ಶಿಕ್ಷಣದ ಸಮಾನತೆ, ಸಾರ್ವತ್ರಿಕರಣ ಎಂಬ ಘೋಷಣೆಗಳನ್ನು ನೀಡಿ ಬಹು ಸಂಖ್ಯಾತ ಬಡ ಹಾಗೂ ಮಧ್ಯಮ ವರ್ಗದವರಿಂದ ಶಿಕ್ಷಣವನ್ನು ಕಸಿಯುವ ಹುನ್ನಾರ ನಡೆದಿದೆ ಎಂದರು.

ಹಿಂದಿ ಭಾಷೆಯನ್ನು ಒತ್ತಾಯ ಪೂರಕವಾಗಿ ದೇಶದ ಜನರ ಮೇಲೆ ಹೇರುವಂತಹ ಕುತಂತ್ರ ಇದರಲ್ಲಿ ಅಡಗಿದೆ. ಹುನ್ನಾರವಿರುವ ಎನ್‌ಇಪಿ ದೇಶದಾದ್ಯಂತ ವಿರೋಧಿಸಬೇಕಿದೆ ಎಂದರು.

ರಾಜ್ಯ ಉಪಾಧ್ಯಕ್ಷ ವಿ.ಎನ್.ರಾಜಶೇಖರ್, ರಾಜ್ಯ ಕಾರ್ಯದರ್ಶಿ ಎಸ್.ಜಿ.ಮಹೇಶ್, ವಿಜ್ಞಾನಿ ಆರ್.ಎಲ್.ಮೌರ್ಯನ್, ಪ್ರೊ.ಸೋಮಶೇಖರಪ್ಪ ಇತರರು ಇದ್ದರು.